ಇತರೆ ಪ್ರದೇಶಗಳಿಂದ ಲಭ್ಯವಿರಬಹುದಾದ ಅನುಪಯೋಗಿ ಹೆಚ್ಚುವರಿ ಕಬ್ಬನ್ನು ಜಿಲ್ಲಾಧಿಕಾರಿಗಳು ಖರೀದಿಸಬಹುದಾಗಿದೆ.

ಇ) –ಇಲ್ಲ

–ಅವಕಾಶವಿರುವುದಿಲ್ಲ.

ರಾಜ್ಯದಲ್ಲಿ ಗೋ ಶಾಲೆಗಳನ್ನು ತೆರೆಯುವುದು

3118 (3782) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ. (ತಿಕೋಟ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಬರಗಾಲ ಸಂಭವಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯದ ಯಾವ ಜಿಲ್ಲೆಗಳಲ್ಲಿ ಬರಗಾಲ ಉದ್ಭವಿಸಿದೆ;

ಇ) ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಗಳಲ್ಲಿ ಇರುವ ಜಾನುವಾರುಗಳ ಸಂಖ್ಯೆ ಎಷ್ಟು; ಸರ್ಕಾರ ಈ ಜಾನುವಾರುಗಳ ಸಂರಕ್ಷಣೆಗಾಗಿ ಗೋಶಾಲೆಗಳನ್ನು ತೆರೆದಿದೆಯೇ;

ಈ) ಹಾಗಾದರೆ ರಾಜ್ಯದ ಯಾವ ಪ್ರದೇಶಗಳಲ್ಲಿ ಗೋಶಾಲೆಗಳನ್ನು ಆರಂಭಿಸಲಾಗಿದೆ; ಆರಂಭಿಸದೇ ಇದ್ದಲ್ಲಿ ಪ್ರತಿ ಹೋಬಳಿ ಪ್ರದೇಶಕ್ಕೆ ಒಂದರಂತೆ ಗೋಶಾಲೆ ತೆರೆಯಲು ಕ್ರಮ ಕೈಗೊಳ್ಳಲಾಗುವುದೇ;

ಉ) ಯಾವ ಕಾಲಮಿತಿಯಲ್ಲಿ ತೆರೆಯಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಬಂದಿದೆ.

ಆ) ಅನುಬಂಧ–1 ರಲ್ಲಿ ನೀಡಲಾಗಿದೆ

ಇ) ಅನುಬಂಧ–2ರಲ್ಲಿ ನೀಡಲಾಗಿದೆ ಅವಶ್ಯವಿದ್ದೆಡೆಯಲ್ಲಿ ಈಗಾಗಲೇ ತೆರೆಯಲಾಗಿದೆ

ಈ) ಕೊಪ್ಪಳ ಜಿಲ್ಲೆ– 3
ಗದಗ ಜಿಲ್ಲೆ– 4
ತುಮಕೂರು ಜಿಲ್ಲೆ– 2
ಬಿಜಾಪುರ ಜಿಲ್ಲೆ– 2
ಕೋಲಾರ ಜಿಲ್ಲೆ– 5
ಒಟ್ಟು 16 ಗೋಶಾಲೆಗಳನ್ನು ತೆರೆಯಲಾಗಿದೆ

ತುಮಕೂರು ಮತ್ತು ಕೋಲಾರ ಜಿಲ್ಲೆಯ ಗೋಶಾಲೆಗಳನ್ನು ಈಗಾಗಲೇ ಮುಚ್ಚಲಾಗಿದೆ. ಅವಶ್ಯಕತೆಗನುಗುಣವಾಗಿ ಗೋಶಾಲೆಗಳನ್ನು ಪ್ರಾರಂಭಿಸಲು ಕ್ರಮ ಸಂಬಂದಪಟ್ಟ ಜಿಲ್ಲಾಧಿಕಾರಿಗಳು ಕೈಗೊಳ್ಳುತ್ತಾರೆ.

ಉ) ಅವಶ್ಯಕತೆಗೆ ಅನುಗುಣವಾಗಿ

ಸರ್ಕಾರದ ಘೋಷಣೆಯಂತೆ ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿ ಉದ್ಭವಿಸಿರುವ ಜಿಲ್ಲೆಗಳ ವಿವರ.

ಕ್ರ.ಸಂ	ಜಿಲ್ಲೆಗಳು
1.	ಬೆಂಗಳೂರು ನಗರ
2.	ಬೆಂಗಳೂರು ಗ್ರಾಮಾಂತರ
3.	ಕೋಲಾರ

4.	ಚಿತ್ರದುರ್ಗ
5.	ತುಮಕೂರು
6.	ದಾವಣಗೆರೆ
7.	ಶಿವಮೊಗ್ಗ
8.	ಚಾಮರಾಜನಗರ
9.	ಮೈಸೂರು
10.	ಮಂಡ್ಯ
11.	ಚಿಕ್ಕಮಗಳೂರು
12.	ಹಾಸನ
13.	ಬೆಳಗಾಂ
14.	ಧಾರವಾಡ
15.	ಹಾವೇರಿ
16.	ಗದಗ್
17.	ಬಿಜಾಪುರ
18.	ಬಾಗಲಕೋಟೆ
19.	ಉತ್ತರ ಕನ್ನಡ
20.	ಗುಲ್ಬರ್ಗಾ
21.	ಬಳಾರಿ
22.	ರಾಯಚೂರು
23.	ಕೊಪ್ಪಳ
24.	ಬೀದರ್
25.	ಕೊಡಗು

ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಜಾನುವಾರುಗಳ ಸಂಖ್ಯೆ 1997ರ ಜಾನುವಾರು ಗಣತಿಯಂತೆ

ಕ್ರಮ	ಜಿಲ್ಲೆಯ ಹೆಸರು	ದನಗಳು ಮತ್ತು ಎಮ್ಮೆಗಳು
1.	ಬೆಂಗಳೂರು ನಗರ	2,12,514
2.	ಬೆಂಗಳೂರು ಗ್ರಾಮಾಂತರ	9,49,478
3.	ಬೆಳಗಾಂ	11,50,644
4.	ಬಳ್ಳಾರಿ	6,11,810
5.	ಬೀದರ್	4,37,155
6.	ಬಿಜಾಪುರ	4,04,576
7.	ಚಿಕ್ಕಮಗಳೂರು	5,05,418
8.	ಚಿತ್ರದುರ್ಗ	4,91,799
9.	ದಕ್ಷಣ ಕನ್ನಡ	4,12,339
10.	ಧಾರವಾಡ	3,11,157

11.	ಗುಲ್ಬರ್ಗಾ	10,41,185
12.	ಹಾಸನ	8,21,593
13.	ಕೊಡಗು	1,81,786
14.	ಕೋಲಾರ	6,79,384
15.	ಮಂಡ್ಯ	5,34,495
16.	ಮೈಸೂರು	6,50,442
17.	ರಾಯಚೂರು	5,54,222
18.	ಶಿವಮೊಗ್ಗ	8,01,567
19.	ತುಮಕೂರು	8,67,036
20.	ಉತ್ತರ ಕನ್ನಡ	5,53,823
21.	ಬಾಗಲಕೋಟೆ	4,69,891
22.	ಚಾಮರಾಜ ನಗರ	3,61,805
23.	ದಾವಣಗೆರೆ	6,01,508
24.	ಗದಗ್	3,04,755
25.	ಹಾವೇರಿ	4,64,818
26.	ಕೊಪ್ಪಳ	3,50,256
27.	ಉಡುಪಿ	4,72,857
	ಒಟ್ಟು	1,51,98,313

ಭಾಲ್ಕಿ ತಾಲ್ಲೂಕಿನ ಮಹಾತ್ಮಗಾಂಧಿ ಸಕ್ಕರೆ ಕಾರ್ಖಾನೆಯಲ್ಲಿ ಸಿಬ್ಬಂದಿಗಳ ನೇಮಕಾತಿ

3123 (3587) : ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಮಹಾತ್ಮಗಾಂಧಿ ಸಕ್ಕರೆ ಕಾರ್ಖಾನೆಯಲ್ಲಿ ನೇಮಕಗೊಳ್ಳುತ್ತಿರುವ ಹುದ್ದೆಗಳು ಮರಿಟ್ ಹಾಗೂ ರೋಸ್ಟರ್‌ನಲ್ಲಿ ನೇಮಕಾತಿ ಯಾಗುತ್ತಿದೆಯೆ;

ಆ) ಇಲ್ಲದಿದ್ದರೆ, ಯಾವ ಪದ್ಧತಿಯಲ್ಲಿ ಹುದ್ದೆಯನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ?

ಶ್ರೀ ಎಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ದಿ ಮಾಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ಭಾಲ್ಕಿ ಬೀದರ್ ಜಿಲ್ಲೆ ಇದು ಹೊಸದಾಗಿ ಸ್ಥಾಪನೆಗೊಂಡ ಕಾರ್ಖಾನೆಯಾಗಿದ್ದು, ಸೆಪ್ಟೆಂಬರ್–ಅಕ್ಟೋಬರ್ 2003ರಲ್ಲಿ ಕಬ್ಬು ನುರಿಸುವ ಹಂಗಾಮನ್ನು ಪ್ರಾರಂಭಿಸಲು ಕಾರ್ಖಾನೆಯು ಉದ್ದೇಶಿಸಿರುತ್ತದೆ. ಕಾರ್ಖಾನೆಯ ವ್ಯಂದಬಲ ಹಾಗೂ ವೇತನ ಶ್ರೇಣಿಗೆ ಸರ್ಕಾರದ ಅನುಮತಿಗಾಗಿ ಕಾರ್ಖಾನೆಯು ಪ್ರಸ್ತಾವನೆ ಸಲ್ಲಿಸಿದ್ದು, ಅದು ಪರಿಶೀಲನೆಯ ಹಂತದಲ್ಲಿದೆ. ಈ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 17ರನ್ವಯ ಸರ್ಕಾರದ ಅನುಮೋದನೆ ದೊರೆತ ನಂತರ ಅದಕ್ಕನುಗುಣವಾಗಿ, ಕಾರ್ಖಾನೆಯಲ್ಲಿ ನೇಮಕಾಗಿ ಪ್ರಕ್ರಿಯೆ ಪ್ರಾರಂಭಿಸಬೇಕಾಗಿದೆ. ಆದ್ದರಿಂದ ಕಾರ್ಖಾನೆಯಲ್ಲಿ ಸದ್ಯಕ್ಕೆ ಯಾವುದೇ ನೇಮಕಾತಿ ಪ್ರಾರಂಭಿಸಿರುವುದಿಲ್ಲ.